18. ಕುಂಚಿಕೊರವರ ಓಣಿ
19. ಮಿನಿಮಾದರ ವಡ್ಡರ ಓಣಿ
20. ಪೈಲ್ವಾನ್‌ಗಲ್ಲಿ 2ನೇ ಹಂತ
21. ನೂತನ ಗಿರಣಿ ಹತ್ತಿರ
22. ಇಂದಿರಾನಗರ, ಮನಗೊಳಿ

ಈ ವಿಜಾಪುರ ನಗರ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಕೊಳಚೆ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಅ. ಖಿದಾನಪುರಗಲ್ಲಿ ಕೊಳಚೆ ಪ್ರದೇಶದಲ್ಲಿ 1.50 ಲಕ್ಷ ರೂ.ಗಳ ಅಂದಾಜು ವೆಚ್ಚದಲ್ಲಿ ಕುಡಿಯುವ ನೀರು, ನೆಲಹಾಸು, ಬೀದಿ ದೀಪ ಒದಗಿಸುವುದು.

ಆ. ಗೊಲ್ಲರ ಓಣಿ ಕೊಳಚೆ ಪ್ರದೇಶದಲ್ಲಿ 1.50 ಲಕ್ಷ ರೂ.ಗಳ ಅಂದಾಜಿನಲ್ಲಿ ನೆಲಹಾಸು, ಕುಡಿಯುವ ನೀರು ಬೀದಿ ದೀಪ ಒದಗಿಸುವುದು.

ಇ. ಜಾಡರಗಲ್ಲಿ ಕೊಳಚೆ ಪ್ರದೇಶದಲ್ಲಿ 1.50 ಲಕ್ಷ ರೂ.ಗಳ ಅಂದಾಜಿನಲ್ಲಿ ನೆಲಹಾಸು, ಒಳಚರಂಡಿ ಮತ್ತು ಬೀದಿ ದೀಪ ಒದಗಿಸುವುದು.

ಈ. ಅಳವಿ ಮಸೀದಿ ಕೊಳಚೆ ಪ್ರದೇಶದಲ್ಲಿ 1.00 ಲಕ್ಷ ರೂ.ಗಳ ಅಂದಾಜಿನಲ್ಲಿ ನೆಲಹಾಸು ಒದಗಿಸುವುದು.

ಉ. ತಾಜಬಾವುಡಿ ಕೊಳಚೆ ಪ್ರದೇಶದಲ್ಲಿ 1.00 ಲಕ್ಷ ರೂ.ಗಳ ಅಂದಾಜಿನಲ್ಲಿ ಒಳಚರಂಡಿ ವ್ಯವಸ್ಥೆ ಮತ್ತು ಚರಂಡಿ ವಿಸ್ತರಿಸುವುದು.

ಊ) ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯು ಸ್ವಾಯತ್ತ ಸಂಸ್ಥೆಯಾಗಿ ರೂಪುಗೊಂಡಿರುವುದರಿಂದ ವಿಸರ್ಜಿಸುವುದು ಸೂಕ್ತವಲ್ಲ. ಆದರೆ ಸ್ಥಳೀಯ ಸಂಸ್ಥೆಗಳು ಕೊಳಚೆ ನಿರ್ಮೂಲನಾ ಮಂಡಳಿ ಅಭಿವೃದ್ಧಿಪಡಿಸಿದ ಕೊಳಚೆ ಪ್ರದೇಶಗಳ ನಿರ್ವಹಣೆಯನ್ನು ಮಾಡಬೇಕಾಗಿರುತ್ತದೆ.

ಕೃಷಿ ವಿಶ್ವವಿದ್ಯಾಲಯಗಳ ವಿವಿಧ ಕಾರ್ಯಕ್ರಮಗಳು.

127 (551) ಶ್ರೀ ಬೆಲ್ಲದ ಚಂದ್ರಕಾಂತ ಗುರಪ್ಪ (ಧಾರವಾಡ) :— ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 1995-96, 96-97 ಮತ್ತು 97-98ನೇ ಸಾಲುಗಳಲ್ಲಿ ರಾಜ್ಯದ ಎರಡು ಕೃಷಿ ವಿಶ್ವವಿದ್ಯಾಲಯಗಳ ವಿವಿಧ ಕಾರ್ಯಕ್ರಮಗಳಿಗೆ ಒದಗಿಸಿದ ಹಣ ಎಷ್ಟು; (ವಿಶ್ವವಿದ್ಯಾಲಯವಾರು ವಿವರ ಒದಗಿಸುವುದು)

ಅ) ಪ್ರತಿ ವಿಶ್ವವಿದ್ಯಾಲಯಗಳಿಗೆ ಮೇಲಿನ 5 ವರ್ಷಗಳಿಗೆ ಪ್ರಮುಖವಾಗಿ ವಿವಿಧ ವಿಭಾಗಗಳಲ್ಲಿಯ ಅದರ ಸಂಶೋದನೆಯ ಪ್ರಗತಿಯ ಲಾಭ ಯಾವ ಬೆಳೆಗಳಲ್ಲಿ ದೊರೆತಿದೆ ಅದರ ಸಲುವಾಗಿ ಪ್ರತಿ ವರ್ಷ ನೀಡಿರುವ ಹಣದ ವಿವರ ಕೊಡುವಿರಾ?

ಇ) ರಾಜ್ಯದ ರೈತರಿಗೆ ಬೇಕಾದ ವಿವಿಧ ಬೆಳೆಗಳ ಬೀಜಗಳು ಯಾವುವು ಹಾಗೂ ಅವುಗಳನ್ನು ಬೆಳೆಯಿಸಿ ಅದರಲ್ಲಿ ಎಷ್ಟು ಪ್ರಮಾಣದ ವಿತರಣೆ ಮಾಡಿದ ಪ್ರಮಾಣವೆಷ್ಟು? (ವಿವರ ಒದಗಿಸುವುದು)

ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :—

ಅ) ಬೆಂಗಳೂರು ಮತ್ತು ಧಾರವಾಡ ಕೃಷಿ ವಿಶ್ವವಿದ್ಯಾನಿಲಯಗಳಿಗೆ 1995-96, 1996-97 ಮತ್ತು 1997-98ನೇ ಸಾಲಿನಲ್ಲಿ ವಿವಿಧ ಕಾರ್ಯಕ್ರಮಗಳಿಗೆ ಒದಗಿಸಿದ ಹಣ ಈ ಕೆಳಗಿನಂತಿದೆ.

	1995-96	1996-97	1997-98
ಯೋಜನೇತರ ಅನುದಾನ		(ರೂ.ಲಕ್ಷಗಳಲ್ಲಿ)	
ಬೆಂಗಳೂರು	1667.00	1792.00	1929.00
ಧಾರವಾಡ	629.00	676.00	826.00
ಯೋಜನೆ			
ಬೆಂಗಳೂರು	833.78	1145.48	1167.38
ಧಾರವಾಡ	909.96	1290.52	1181.625

ಆ) ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಒಟ್ಟು 22 ಹೊಸ ತಳಿಗಳನ್ನು ಬಿಡುಗಡೆ ಮಾಡಿದ್ದು, ಇದರಲ್ಲಿ ಆಹಾರ ಧಾನ್ಯಗಳು, ಬೇಳೆಕಾಳು, ಎಣ್ಣೆಬೀಜ ಹಾಗೂ ವಾಣಿಜ್ಯ ಬೆಳೆಗಳು ಸೇರಿರುತ್ತವೆ.

ಧಾರವಾಡ ಕೃವಿವಿ ಹತ್ತಿ, ಕಬ್ಬು, ಗೋದಿ ಹಾಗೂ ತೋಟಗಾರಿಕೆ ಬೆಳೆಗಳಾದ ಮಾವು, ಸಪೋಟ, ಕರಿಬೇವು ಅಡಿಕೆ ಮುಂತಾದವುಗಳಲ್ಲಿ ಪ್ರಗತಿ ಕಂಡಿದೆ.

ಸದರಿ ಬೆಳೆಗಳ ಮೇಲೆ ಎರಡು ಕೃವಿವಿನಿಲಯಗಳು ಖರ್ಚು ಮಾಡಿರುವ ಹಣದ ವಿವರ ಈ ಕೆಳಗಿನಂತಿದೆ.

	1995-96	1996-97	1997-98
ಕೃವಿವಿ, ಬೆಂಗಳೂರು	1478 ಲಕ್ಷ	1504 ಲಕ್ಷ	1446 ಲಕ್ಷ
ಕೃವಿವಿ, ಧಾರವಾಡ	8.70 ಲಕ್ಷ	9.00 ಲಕ್ಷ	8.80 ಲಕ್ಷ

ಇ) ರಾಜ್ಯದ ರೈತರಿಗೆ ಬೇಕಾದ ವಿವಿಧ ಬೆಳೆಗಳ ಬೀಜಗಳು ಭತ್ತ, ರಾಗಿ, ಬೇಳೆಕಾಳು, ನೆಲಗಡಲೆ, ಸೂರ್ಯಕಾಂತಿ ಸೋಯ ಅವರೆ, ಹತ್ತಿ, ಕಬ್ಬು, ಗೋಧಿ, ಜೋಳ ಹಾಗೂ ತೋಟಗಾರಿಕೆ ಬೆಳೆಗಳು. ಈ ತಳಿವರ್ಧಕ ಬೀಜಗಳನ್ನು ಬೆಳೆದು ವಿವಿಧ ಸರ್ಕಾರ ಸಂಸ್ಥೆಗಳಾದ ಕೃಷಿ ಇಲಾಖೆ, ಕರ್ನಾಟಕ ರಾಜ್ಯ ಬೀಜ ನಿಗಮ ರಾಷ್ಟ್ರೀಯ ಬೀಜ ನಿಗಮ ಮತ್ತು ಕೆಲವು ಖಾಸಗಿ ಸಂಸ್ಥೆಗಳ ಮೂಲಕ ರೈತರಿಗೆ ಒದಗಿಸಲಾಗುತ್ತಿದೆ.

ಬೆಳಗಾವಿ ಜಿಲ್ಲೆಯಲ್ಲಿರುವ ಸಹಕಾರಿ ಬ್ಯಾಂಕು ಕುರಿತು.

128(434) ಶ್ರೀ ನಾಯಕ್ ಚಂದ್ರಶೇಖರ್ ಸದಾಶಿವ (ಗೋಕಾಕ್) :— ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಳಗಾವಿ ಜಿಲ್ಲೆಯಲ್ಲಿರುವ ಸಹಕಾರಿ ಬ್ಯಾಂಕು ಪಿಕಾರ್ಡ್ ಬ್ಯಾಂಕುಗಳಿಂದ ಕಳೆದ 3 ವರ್ಷಗಳಲ್ಲಿ ಸಾಲ ಪಡೆದ ರೈತರ ಸಂಖ್ಯೆ ಎಷ್ಟು? ಆ ಪೈಕಿ ಕಬ್ಬು ಬೆಳೆಗಾಗಿ ಸಾಲ ಪಡೆದ ರೈತರ ಸಂಖ್ಯೆ ಎಷ್ಟು?

ಆ) ಸಾಲ ಮರುಪಾವತಿ ಮಾಡಿದ ರೈತರ ಸಂಖ್ಯೆ ಎಷ್ಟು?

ಇ) ಸಾಲ ಮರುಪಾವತಿಯಲ್ಲಿನ ವಿಳಂಬ ತಪ್ಪಿಸಲು ಸಾಲ ಪಡೆದ ರೈತರ ಕಬ್ಬನ್ನು ಸಂಬಂಧಪಟ್ಟ ಕಾರ್ಖಾನೆಗಳಿಗೆ ಸಾಗಿಸಲು ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳೇನು?

ಈ) ನಿಗದಿತ ವೇಳೆಯಲ್ಲಿ ಕಬ್ಬನ್ನು ಸಾಗಿಸಲು ಸಾಧ್ಯವಾಗದಿದ್ದಲ್ಲಿ ಅಂತಹ ರೈತರ ಸಾಲವನ್ನು ಬಡ್ಡಿರಹಿತ ಸಾಲವೆಂದು ಸರ್ಕಾರ ಪರಿಗಣಿಸುವುದೇ?

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) :—

ಅ) ಬೆಳಗಾವಿ ಜಿಲ್ಲೆಯಲ್ಲಿ ಸಹಕಾರ ಬ್ಯಾಂಕ್, ಪಿಕಾರ್ಡ್ ಬ್ಯಾಂಕುಗಳಿಂದ ಸಾಲ ಪಡೆದ ರೈತರ ವಿವರ ಈ ಕೆಳಕಂಡಂತಿದೆ

ವರ್ಷ	ರೈತರ ಸಂಖ್ಯೆ	ಈ ಪೈಕಿ ಕಬ್ಬು ಬೆಳೆಗಾಗಿ ಸಾಲ ಪಡೆದ ರೈತರ ಸಂ.
1995-96	90,412	54,569
1996-97	1,02,618	67,598
1997-98	1,27,539	77, 527
ಜನವರಿ -99ರ ವರೆಗೆ	86,894	53,006